# K.L.E. Society's
# BASAVAPRABHU KORE ARTS, SCIENCE AND COMMERCE COLLEGE, CHIKODI – 591 201.

**ACCREDITED AT 'A' GRADE WITH 3.26 CGPA IN 3rd CYCLE**

Website: klebkcollegechikodi.com ☏ : 08338 – 272176 Email – kles_bkcc@rediffmail.com


==================================================================

## ಕನ್ನಡ ವಿಭಾಗ – ಸ್ಥಾಪನೆ 1969

### ಧ್ಯೇಯೋದ್ದೇಶಗಳು

ಕನ್ನಡ ವಿಭಾಗದ ಮುಖ್ಯ ಧ್ಯೇಯವು ರಚನಾತ್ಮಕ ಹಾಗೂ ಜೀವನದ ಮೌಲ್ಯಗಳನ್ನೊಳಗೊಂಡಿದೆ. ಅದರೊಂದಿಗೆ ಕನ್ನಡ ಭಾಷೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯ ಬಗ್ಗೆ ಪ್ರಜ್ಞೆ, ಜಾಗ್ರತಿಯನ್ನು ಮೂಡಿಸುವುದಾಗಿದೆ. ವಿಭಾಗವು ಸ್ನಾತಕ(ಪದವಿ) ವಿದ್ಯಾರ್ಥಿಗಳಿಗೆ ಕನ್ನಡವನ್ನು ಒಂದು ಭಾಷೆಯಾಗಿ ಹಾಗೂ ಐಚ್ಛಿಕ ವಿಷಯವಾಗಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದೆ.

ವಿದ್ಯಾರ್ಥಿಗಳು ವಿಚಾರ ಸಂಕಿರಣ, ಕಾರ್ಯಾಗಾರ, ಸಮ್ಮೆಳನ, ಕ್ಷೇತ್ರದರ್ಶನ ಹಾಗೂ ರಚನಾತ್ಮಕ ಬರವಣಿಗೆಗಳನ್ನು ಪ್ರಯೋಗ ಕೇಂದ್ರಿತ ತರಬೇತಿಗಳ ಮುಖಾಂತರ ಪಡೆದುಕೊಳ್ಳುತ್ತಿದ್ದಾರೆ.

### ಕನ್ನಡ ಸಾಹಿತ್ಯ ಸಂಘ :

#### ಕಾರ್ಯ ಚಟುವಟಿಕೆಗಳು

ವಿಭಾಗವು ಕನ್ನಡ ಸಾಹಿತ್ಯದ ಸಂಘದ ಮುಖಾಂತರ ವಿದ್ಯಾರ್ಥಿಗಳು ಸಾಹಿತ್ಯಿಕ, ಸಾಂಸ್ಕೃತಿಕ, ವಿಸ್ತಾರಿತ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋಸ್ತಾಹಿಸುತ್ತದೆ. ವಿಭಾಗದ ಸದಸ್ಯರ ಮುಖಾಂತರ ವರ್ಷದುದ್ದಕ್ಕೂ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಕಾಲಕಾಲಕ್ಕೆ ಕಾರ್ಯಾಗಾರ, ವಿಚಾರ ಸಂಕಿರಣ ಇನ್ನಿತರೆ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಏರ್ಪಡಿಸಿ ವಿದ್ಯಾರ್ಥಿಗಳ ಬೌದ್ಧಿಕ ಹಾಗೂ ತಾತ್ವಿಕ ಗುಣಮಟ್ಟವನ್ನು ಉನ್ನತೀಕರಿಸಿ ಚಿಂತನೆಗೆ ಒಳಪಡಿಸುತ್ತದೆ.

1969 ರಲ್ಲಿ ಪ್ರಾರಂಭವಾದ ಕನ್ನಡ ವಿಭಾಗವು ಡಾ. ಎಸ್.ಎಸ್ ಕೋತಿನ ಅವರ ಮುಂದಾಳತ್ವದಲ್ಲಿ ಕಾರ್ಯಾರಂಭ ಮಾಡಿತು. ಶ್ರೀ ಎಸ್.ವಾಯ್ ಹಂಜಿ ಮತ್ತು ಶ್ರೀ ಬಿ.ವ್ಹಿ ಬನ್ನೂರ ಅವರು ವಿಭಾಗದ ಇನ್ನಿಬ್ಬರು ಸದಸ್ಯರಾಗಿದ್ದರು.

ಡಾ. ಎಸ್.ಎಸ್. ಕೋತಿನ ಅವರು ಎನ್.ಸಿ.ಸಿ ಅಧಿಕಾರಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. ಅವರು ಅಂಡಯ್ಯನ 'ಕಬ್ಬಿಗರ ಕಾವ್ಯ' ವಿಷಯದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ ಪದವಿ ಪಡೆದುಕೊಂಡಿದ್ದರು. ಹಾಗೆಯೇ ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿಯೂ ಕಾರ್ಯ ನಿರ್ವಹಿಸಿ ಅನೇಕ ಮೌಲಿಕ ಗ್ರಂಥಗಳನ್ನು ರಚಿಸಿದ್ದರು. 1985 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕನ್ನಡ ಅಧ್ಯಯನ ಸಂಸ್ಥೆಗೆ ರೀಡರ್ ಆಗಿ ಪದೋನ್ನತಿ ಹೊಂದಿದ್ದರು.

ಶ್ರೀ ಎಸ್.ವಾಯ್ ಹಂಜಿಯವರು ಎನ್.ಎಸ್,ಎಸ್ ಅಧಿಕಾರಿಯಾಗಿ, ಸಹಕಾರ ಕ್ಷೇತ್ರಗಳಲ್ಲಿ ಹೆಸರುವಾಸಿಗಳಾದ ದಿ. ಅಪ್ಪಣ್ಣಗೌಡ ಪಾಟೀಲ, ಶ್ರೀ ರುದ್ರಗೌಡ ಮಲಗೌಡ ಪಾಟೀಲ, ಶ್ರೀ ಬಸವಪ್ರಭು ಕೋರೆ ಹಾಗೂ ಶ್ರೀ ಚಿದಾನಂದ ಕೋರೆ ಅವರುಗಳ ಜೀವನ ಚರಿತ್ರೆಗಳನ್ನು ಬರೆದು ಪ್ರಕಟಿಸಿದ್ದಾರೆ.

ಶ್ರೀ ಬಿ ವ್ಹಿ ಬನ್ನೂರ ಅವರು ಹಳಗನ್ನಡ ಸಾಹಿತ್ಯದಲ್ಲಿ ವಿಶೇಷ ಪರಿಣಿತಿ ಪಡೆದಿದ್ದರು. ಆನಂತರ ಶ್ರೀ ಎಸ್.ಎಮ್ ಗೌಡರ ಈ ವಿಭಾಗಕ್ಕೆ ಅಥಣಿಯಿಂದ ವರ್ಗಾವಣೆಯಾಗಿ ಬಂದು ಕೆಲವು ವರ್ಷ ವಿಭಾಗದ ಮುಂದಾಳತ್ವ ವಹಿಸಿದ್ದರು. ಶ್ರೀಯುತರು ಕೇಶಿರಾಜನ 'ಶಬ್ದಮಣಿ ದರ್ಪಣ'ದ ಮೇಲೆ ವಿಶೇಷ ಅಧ್ಯಯನ ನಿರತರಾಗಿದ್ದರು.

1985 ರಲ್ಲಿ ಶ್ರೀ ಎಸ್.ಎಸ್. ಮಠದ ವಿಭಾಗಕ್ಕೆ ನೇಮಕಗೊಂಡು, ಎನ್.ಎಸ್.ಎಸ್ ಅಧಿಕಾರಿಗಳಾಗಿ, ಯೋಗಪಟುವಾಗಿ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು.

1992 ರಲ್ಲಿ ಅಥಣಿಯಿಂದ ಶ್ರೀ ಜೆ.ಎಲ್. ಕದಮ ಅವರು ವರ್ಗಾವಣೆಗೊಂಡು ಕಾರ್ಯನಿರತರಾದರು, 2002ರಲ್ಲಿ ಡಾ. ಕೆ.ಎಸ್. ಶರ್ಮಾ ಅವರ ಜೀವನ ಮತ್ತು ಸಾಹಿತ್ಯದ ಮೇಲೆ ಎಮ್.ಫಿಲ್ ಸಂಪ್ರಭಂದವನ್ನು ಕೆ.ವಿ.ವಿ ಗೆ ಸಲ್ಲಿಸಿ ಎಮ್.ಫಿಲ್. ಪದವಿ ಪಡೆದುಕೊಂಡಿದ್ದರು. ಶ್ರೀಯುತರು ಎನ್.ಎಸ್.ಎಸ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ.

2017–18 ರಲ್ಲಿ ರಾಣಿ ಚೆನ್ನಮ್ಮ ವಿ.ವಿ ಬೆಳಗಾವಿಯ ಬಿ.ಸಿ.ಎ ಮತ್ತು ಬಿ.ಎಸ್.ಸಿ ನಾಲ್ಕನೆಯ ಸೆಮಿಸ್ಟರನ ಕನ್ನಡ ಅವಶ್ಯಕ ಪಠ್ಯಪುಸ್ತಕ ಸಾಹಿತ್ಯ 'ಸಾಹಿತ್ಯ ಸಿಂಚನ – 4 ವನ್ನು ಸಂಪಾದಿಸಿದ್ದಾರೆ.

ವಿಭಾಗದ ಇನ್ನೋಬ್ಬ ಸದಸ್ಯ ಕೆ. ರಾಮರೆಡ್ಡಿ ಅವರು 2008 ರಲ್ಲಿ ಶ್ರೀ ಕಾಡಸಿದ್ದೇಶ್ವರ ಕಲಾ ಹಾಗೂ ಎಚ್.ಎಸ್. ಕೋತಂಬರಿ ವಿಜ್ಞಾನ ಸಂಸ್ಥೆ ಹುಬ್ಬಳ್ಳಿಯಿಂದ ವರ್ಗವಾಗಿ ಬಂದರು.

ಶ್ರೀ ಟಿ. ಪಿ ಬಣಕಾರೆ ಅವರು 1997 ರಲ್ಲಿ ಈ ವಿಭಾಗಕ್ಕೆ ಸೇರ್ಪಡೆಗೊಂಡರು, ಅವರು ಸೆಟ್ ಪರೀಕ್ಷೆ ಪಾಸಾಗಿದ್ದರು.

2013 ರಲ್ಲಿ ಡಾ. ಎಸ್.ಎಮ್. ಪಾನಬುಡೆ ಅವರು ಸವದತ್ತಿಯ ಎಸ್.ವ್ಹಿ.ಎಸ್ ಬೆಳ್ಳುಬ್ಬಿ ಮಹಾವಿದ್ಯಾಲಯದಿಂದ ಸಹ ಪ್ರಾದ್ಯಾಪಕರಾಗಿ ವರ್ಗಾವಣೆಗೊಂಡು ಬಂದರು. ಅವರು ಡಾ. ಚಂದ್ರಶೇಖರ ಕಂಬಾರ ಅವರ ನಾಟಕಗಳ ಮೇಲೆ ಪಿ.ಹೆಚ್.ಡಿ ಮಾಡಿದ್ದಾರೆ. ಎನ್.ಸಿ.ಸಿ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಲ್ಲದೆ ಸೇವಾವಧಿಯಲ್ಲಿ ಎನ್.ಸಿ.ಸಿ ಯಿಂದ ಅತ್ಯುತ್ತಮ ಅಧಿಕಾರಿ ಎಂದು ಪ್ರಶಸ್ತಿ ಪಡೆದಿರುತ್ತಾರೆ. ಯು.ಜಿ.ಸಿ ಯೋಜನೆ ಅಡಿಯಲ್ಲಿ 'ಸುಡಗಾಡು ಸಿದ್ಧರು' ಒಂದು ಜನಾಂಗಿಕ ಅಧ್ಯಯನ ಸಂಶೋಧನಾ ಪ್ರಬಂಧ 2014 ರಲ್ಲಿ ಸಲ್ಲಿಸಿದ್ದಾರೆ. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬಿ.ಎ. 1, 2 ಐಚ್ಛಿಕ ಮತ್ತು ಬಿ.ಎ. 4ನೇ ಸೆಮಿಸ್ಟರಗಳ ಪಠ್ಯ ಪುಸ್ತಕಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ.

ಒಟ್ಟಾರೆ 1969 ರಿಂದ ಇಲ್ಲಿಯವರೆಗೆ ಕನ್ನಡ ಸಾರಸ್ವತ ಲೋಕದ ದಿಗ್ಗಜರಾದ ಶ್ರೀ ಪಾಟೀಲ ಪುಟ್ಟಪ್ಪ, ಡಾ. ಎಂ.ಎಂ. ಕಲಬುರ್ಗಿ, ಡಾ. ಶಿವರಾಮ ಕಾರಂತ, ಡಾ. ಎಸ್.ಎಮ್. ವೃಷಭೇಂದ್ರಸ್ವಾಮಿ, ಹುಕ್ಕೇರಿ ಬಾಳಪ್ಪ, ಚಂಪಾ, ಹಂಪನಾ, ಸಿದ್ದಲಿಂಗಯ್ಯ, ಡಾ. ಚೆನ್ನವೀರ ಕಣವಿ, ಡಾ. ಗುರುಲಿಂಗ ಕಾಪಸೆ, ಡಾ. ಈರಣ್ಣ ಇಟಗಿ, ಡಾ. ಶಂಬು ಬಳಿಗಾರ, ಡಾ ಚಂದ್ರಶೇಖರ ನಂಗಲಿ, ಡಾ. ಶಾಂತಿನಾಥ ದಿಬ್ಬದ, ಡಾ. ಎಸ್.ಎಮ್. ಗಂಗಾಧರಯ್ಯ ಇತ್ಯಾದಿ ವಿದ್ವಾಂಸರು ವಿಭಾಗದಡಿಯಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಮಾರ್ಗದರ್ಶನ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ಪ್ರಸ್ತುತ ಡಾ. ಎಸ್.ಎಮ್. ಪಾನಬುಡೆ, ವಿಭಾಗದ ಮುಖ್ಯಸ್ಥರಾಗಿ, ಶ್ರೀ ಜೆ.ಎಲ್. ಕದಮ್ ಹಾಗೂ ಶ್ರೀ ಎಸ್.ಕೆ. ನಾಯಿಕ ಅವರು ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.